



ಬಂಡೀಪುರದಲ್ಲಿ ರಸ್ತೆ ದಾಟುತ್ತಿರುವ ಆನೆ

ವನ್ಯಜೀವಿಗಳೂ ಸೇರಿವೆ.

2013ರ ನವೆಂಬರ್ 13ರಂದು ಒಂದೇ ಅವಘಡದಲ್ಲಿ 4050 ಆನೆಗಳು ರೈಲಿಗೆ ಸಿಕ್ಕಿ 5 ವಯಸ್ಕ, 2 ಮರಿಯಾನೆಗಳು ಸಾವನ್ನಪ್ಪಿ, ಹತ್ತು ಆನೆಗಳು ತೀವ್ರ ಗಾಯಗೊಂಡಿದ್ದವು. ಪೂರ್ಬಶಾಯರ್ಬರಿ ಎಂಬಲ್ಲಿ 4 ಆನೆಗಳು ರೈಲಿಗೆ ಸಿಕ್ಕಿ 2015ರ ಮೇ 8ರಂದು ಒಂದು ಆನೆ ಸತ್ತಿದೆ. 2014ರ ಜುಲೈ 2ರಂದು ಅಲಿಪುರ್ದುವರ್ ಬಳಿ ಎರಡು ವಯಸ್ಕ ಆನೆಗಳು ರೈಲಿನಿಂದ ಜಜ್ಜಿಹೋಗಿವೆ. ಮಹಾರಾಷ್ಟ್ರದಲ್ಲೂ ಆನೆ, ಚಿರತೆ ಮತ್ತಿತರ ಪ್ರಾಣಿಗಳು ರೈಲಿಗೆ ಸಿಕ್ಕಿ ಸಾವನ್ನಪ್ಪಿವೆ. ರಾಜಸ್ಥಾನದ ಕೋಟಾ ಬಳಿ ರಾಜಧಾನಿ ಎಕ್ಸ್‌ಪ್ರೆಸ್ ರೈಲಿಗೆ ಸಿಲುಕಿ ಸತ್ತ ಬ್ರೋಕನ್ ಟೈಲ್ ಹುಲಿ ರಣಥಂಬೋರ್ ರಾಷ್ಟ್ರೀಯ ಉದ್ಯಾನದಿಂದ ಸುಮಾರು 200 ಕಿ.ಮೀ. ದೂರ ಕ್ರಮಿಸಿತ್ತು!

ಮೇಲ್ನೋಟಕ್ಕೆ ಅಗ್ಗದ ದರದ ಸಂಪರ್ಕ ಸಾಧನವೆನ್ನಿಸುವ ರೈಲು ಹೆಚ್ಚಾಗಿ ಉಪಯೋಗವಾಗುವುದು ಸರಕು ಸಾಗಣೆಗೆ. ಸರಕುಗಳು ಸಾಗಣೆಯಾಗುವುದು ಕಚ್ಚಾವಸ್ತುಗಳು ದೊರಕುವ ಪ್ರದೇಶಗಳಿಂದ ಕೈಗಾರಿಕಾ ಪ್ರದೇಶಗಳಿಗೆ ಮತ್ತು ಒಂದು ಕೈಗಾರಿಕಾ ಪ್ರದೇಶದಿಂದ (ಕಚ್ಚಾ ವಸ್ತು) ಮತ್ತೊಂದು ಕೈಗಾರಿಕಾ ಪ್ರದೇಶಕ್ಕೆ (ಸಿದ್ಧವಸ್ತು). ಕೊಡಗು, ಕೇರಳದಂತಹ ಸ್ಥಳಗಳ ಕಾಫಿ, ಟೀ ಎಸ್ಟೇಟುಗಳ ಮಾಲೀಕರಿಗೆ ಸವಾಲಾಗಿರುವ ಕೂಲಿ ಕಾರ್ಮಿಕರ ಸಮಸ್ಯೆ ಮತ್ತೊಂದು ಸಂಭವನೀಯತೆ. ಸ್ಥಳೀಯವಾಗಿ ತುಟ್ಟಿಯಾಗಿರುವ ಅಥವಾ ಬಹುತೇಕ ಅಲಭ್ಯವಿರುವ ಕೂಲಿ ಕಾರ್ಮಿಕರ ಸೇವೆಯನ್ನು ಬೇರೆ ರಾಜ್ಯಗಳಿಂದ ಪಡೆಯುವುದು ಇಲ್ಲಿನ ಕಾರ್ಯತಂತ್ರ.

ಕಾರಣವೇನೇ ಇರಲಿ, ಕಾಡಿನ ಮಧ್ಯೆಯೇ ಏಕೆ ರೈಲು ಮಾರ್ಗವೆಂಬ ಪ್ರಶ್ನೆಗೆ ಅಧಿಕಾರಿಗಳ ಉತ್ತರ ನೇರ ದಾರಿ, ಸರಳ ಭೂಸ್ವಾಧೀನ ಪ್ರಕ್ರಿಯೆ ಮತ್ತು ಕಡಿಮೆ ವೆಚ್ಚ. ಉತ್ತರ ಕೇರಳದಲ್ಲಿ ಅಂತರರಾಷ್ಟ್ರೀಯ ವಾಯುಸಂಪರ್ಕ ಇಲ್ಲದಿರುವುದರಿಂದ ಮೈಸೂರಿನಲ್ಲಿ ಅಂತಹ ಸೌಲಭ್ಯ ದೊರಕಿದ್ದೇ ಆದಲ್ಲಿ ರಾಷ್ಟ್ರೀಯ ಉದ್ಯಾನದ ಮೂಲಕ ಓಡಾಟ ಸುಲಭವಾಗಬಹುದು ಎಂಬ ಕಾರಣವೂ ಇರಬಹುದು. ಏನೇ ಇರಲಿ, ಅಭಿವೃದ್ಧಿ, ಸಂಪರ್ಕಗಳನ್ನು ಬಯಸುವವರು ಕಾಡಿನೊಳಗೆ ತೂರಿ ಸಾಗುವ ಬದಲು, ಹೊರಗಿನಿಂದಲೇ ಮಾರ್ಗಗಳನ್ನು ನಿರ್ಮಿಸಿಕೊಂಡರೆ ಒಳಿತು. ಕೆಲವೇ ಮಂದಿಯ ಹಿತ ಕಾಯುವ ಈ ಮಾರ್ಗಗಳು ನಾಡಿನ ಜೀವಾಳವಾಗಿರುವ ಶುದ್ಧ ಗಾಳಿ, ಮಳೆ ಒದಗಿಸುತ್ತಿರುವ ಮತ್ತು ಈ ದೇಶದ ವಿಸ್ತೀರ್ಣದಲ್ಲಿ ಕೇವಲ ಶೇಕಡ 5 ಭಾಗ ಮಾತ್ರವಿರುವ ಸಂರಕ್ಷಿತ ಅರಣ್ಯಗಳನ್ನು ಬಲಿ ತೆಗೆದುಕೊಳ್ಳುವುದು ಬೇಡ. ಅಭಿವೃದ್ಧಿ ಬೇಕು, ಆದರೆ ವನ್ಯಜೀವಿಗಳ ಮತ್ತು ರಕ್ಷಿತ ಕಾಡಿನ ಬೆಲೆ ತೆತ್ತು ಆಗುವುದು ಬೇಡ. ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯವು ಇಂತಹ ಹಾನಿಕಾರಕ ಯೋಜನೆಗಳಿಗೆ ಸಮ್ಮತಿಸದಿರಲಿ.

ಬಂಡೀಪುರದಂತಹ ಅರಣ್ಯ ಪ್ರದೇಶಗಳು ದೇಶದ ಶೇಕಡಾ 5ರಷ್ಟು ಪ್ರದೇಶದಲ್ಲಿ ಮಾತ್ರ ಇದೆ. ಇಂತಹ ಸ್ಥಳಗಳಿಂದ ನಮ್ಮ ಅಭಿವೃದ್ಧಿಯ ಯೋಚನೆಯನ್ನು ಹೊರಗಿಡಬೇಕು. ಪರ್ಯಾಯ ವ್ಯವಸ್ಥೆ ಮತ್ತು ಮಾರ್ಗವಿರುವಾಗ ಕಾಡಿನ ಮೂಲಕ ರೈಲು ದಾರಿ ಮಾಡುವುದು ಒಳಿತಲ್ಲ. ವನ್ಯಜೀವಿಗಳ ಹಿತದೃಷ್ಟಿಯಿಂದ ಬಂಡೀಪುರದ ಮೂಲಕ ಈ ರೈಲ್ವೇ ಹಳಿ ಯೋಜನೆಯೂ ಹಿತಕರವಲ್ಲ.

ಅರಣ್ಯದ ಕಾನೂನುಗಳ ಪರಿಧಿಗೇ ಬರದ ಸುವರ್ಣ ಚತುಷ್ಪಥ ಈಗಾಗಲೇ ರಾಷ್ಟ್ರೀಯ ಉದ್ಯಾನಗಳನ್ನು ಹೊಕ್ಕು ಹೊರಟಿದೆ. ಕಾಡಿನಲ್ಲಿ ಇಷ್ಟೆಲ್ಲಾ ಕೈಯಾಡಿಸುವ ಮಾನವ, ರೈಲಿನಲ್ಲಿ ಸರಕು ತುಂಬಿ ಕಾಡಿನ ಮಧ್ಯೆ ಸಂಚರಿಸುವಾಗ ಏನೆಲ್ಲ ಮಾಡಬಹುದು ಎಂಬ ಆತಂಕಕ್ಕೆ ಸೂಕ್ತ ಉತ್ತರ ಇಲ್ಲ. ●

## ಅರಿವಿಗಾಗಿ ಒಂದು ಯತ್ನ

■ ಆರ್.ರಘುರಾಮ್

ಮಾರ್ಚ್ ಮಾಸದ ಬಿರುಬಿಸಿಲಿನ ಆ ಒಂದು ದಿನ ಕೇರಳದ ವೈನಾಡು ವನ್ಯಜೀವಿ ಧಾಮದ ಮೂಲಕ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 212ರ ಇಕ್ಕೆಲದಲ್ಲಿ ದೈತ್ಯ ಸಸ್ತನಿ ಆನೆಗಳ ಗುಂಪೊಂದು ಜೀವಜಲವನ್ನರಸಿ ರಸ್ತೆದಾಟಿ ಮುಂದೆ ಹೋಗಲು ಸನ್ನದ್ಧವಾಗಿದ್ದವು. ಯಾರಿಗೂ ತೊಂದರೆ ಕೊಡದೆ ರಸ್ತೆಯ ಒಂದು ಬದಿಯಿಂದ ಇನ್ನೊಂದು ಬದಿಗೆ ತೆರಳಲು ಅವು ನಿಂತಿದ್ದವು. ಅದೇ ಸಮಯದಲ್ಲಿ ಮೋಜು, ಮಸ್ತಿ ಮಾಡಿಕೊಂಡು ಪ್ರವಾಸ ಬಂದ ನಾಲ್ವರು ಹದಿಹರೆಯದ ಹುಡುಗರು ವಿನಕಾರಣ ಆ ಪ್ರಾಣಿಗಳ ಮೇಲೆ ಕಲ್ಲು ತೂರಲು ಪ್ರಾರಂಭಿಸಿದರು. ಈ ಸನ್ನಿವೇಶವನ್ನು ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಿಸಿದ ವನ್ಯಜೀವಿ ಸಂರಕ್ಷಕರೊಬ್ಬರು ಕೇರಳ ಅರಣ್ಯ ಇಲಾಖೆಗೆ ಸುದ್ದಿ ಮುಟ್ಟಿಸಿದರು. ಇಲಾಖಾ ಸಿಬ್ಬಂದಿ ಸ್ಥಳಕ್ಕೆ ಬರುವುದರೊಳಗೆ ಆ ಹುಡುಗರ ಗುಂಪು ಅಲ್ಲಿಂದ ಕಾಲ್ಕಿತ್ತಿತ್ತು. ಮೊಬೈಲ್ ಚಿತ್ರೀಕರಣದ ಆಧಾರದ ಮೇಲೆ ತನಿಖೆ ಕೈಗೊಂಡ ಅರಣ್ಯ ಇಲಾಖೆ ತಂಡವು ಮೂರು ದಿನಗಳ ನಿರಂತರ ತನಿಖೆಯ ಬಳಿಕ ಆ ಗುಂಪನ್ನು ಪತ್ತೆಹಚ್ಚಿ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಪ್ರಕಾರ ಪ್ರಕರಣ ದಾಖಲಿಸಿತು.

ಆ ದಿನವೇ ಕರ್ನಾಟಕ ಮೂಲದ ವೈಲ್ಡ್ ಲೈಫ್ ಕನ್ಸರ್ವೇಷನ್ ಸೊಸೈಟಿ, ಕೇರಳದ ವೈನಾಡು ವನ್ಯಜೀವಿ ಧಾಮದಲ್ಲಿ ಹಲವು ದಶಕಗಳಿಂದ ಕ್ರಿಯಾಶೀಲರಾಗಿರುವ ವೈನಾಡು ಪ್ರಕೃತಿ ಸಂರಕ್ಷಣಾ ಸಂಸ್ಥೆ ಮತ್ತು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕ್ರಿಯಾಶೀಲವಾಗಿರುವ ಹಿಮಗಿರಿ ವನ್ಯಜೀವಿ ಸಂರಕ್ಷಣಾ ಸಂಸ್ಥೆಯ ಜೊತೆಗೂಡಿ ಕಾರ್ಯಕ್ರಮವೊಂದನ್ನು ಆಯೋಜಿಸಿತ್ತು. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಮತ್ತು ವೈನಾಡು ವನ್ಯಜೀವಿ ಧಾಮದ ಮೂಲಕ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 212ರ ತನಿಖಾ ಠಾಣೆಗಳಲ್ಲಿ ಪ್ರಯಾಣಿಕರಿಗೆ ಕರಪತ್ರಗಳನ್ನು ವಿತರಿಸಿ ಅರಿವು ಮೂಡಿಸುವುದೇ ಆ ಕಾರ್ಯಕ್ರಮ.

ಅರಣ್ಯಗಳಲ್ಲಿ ಹುಟ್ಟಿ ಹರಿಯುವ ನದಿಗಳು, ಮಾನವವನ್ಯಜೀವಿ ಸಂಬಂಧ, ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ಮತ್ತು ಅಂತರ್ಜಲದ ಮೇಲಾಗುವ ಪರಿಣಾಮ, ವಾಹನಗಳ ಅತಿವೇಗದ ಚಾಲನೆಯಿಂದ ವನ್ಯಜೀವಿಗಳ ಮೇಲಾಗುವ ಪರಿಣಾಮ ಮತ್ತು ವನ್ಯಜೀವಿಗಳಿಗೆ ಕೀಟಲೆ ಅಥವಾ ಹಿಂಸೆ ಮಾಡುವುದು ಇವುಗಳ ಬಗ್ಗೆ ಅರಿವು ಮೂಡಿಸಲಾಗುತ್ತಿತ್ತು. ಕೇರಳ ಮತ್ತು ಕರ್ನಾಟಕ ಅರಣ್ಯ ಇಲಾಖೆ ಬೆಂಬಲದಲ್ಲಿ, ಪ್ರತಿ ವಾರದ ಕೊನೆಯ ಎರಡು ದಿನಗಳಲ್ಲಿ (ಶನಿವಾರ ಮತ್ತು ಭಾನುವಾರ) ಸ್ವಯಂ ಸೇವಕರ ಸಹಕಾರದೊಂದಿಗೆ ಈಗಲೂ ಈ ಕಾರ್ಯಕ್ರಮ ನಡೆಸಲಾಗುತ್ತಿದೆ. ವನ್ಯಜೀವಿಗಳ ಉಳಿವಿನ ನಿಟ್ಟಿನಲ್ಲಿ ಜನರಿಗೆ ಇನ್ನಷ್ಟು ತಿಳುವಳಿಕೆ ನೀಡುವ ಅಗತ್ಯ ಈಗ ಹಿಂದೆಂದಿಗಿಂತ ಹೆಚ್ಚಿದೆ. ●